UASB Library
Newspaper Clippings
Saturday 16-07-2022 Pg .1
Jai Kisan

ಬೆಂಗಳೂರಿನಲ್ಲಿ ಎರಡು ದಿನಗಳ ಕೃಷಿ ಮತ್ತು ತೋಟಗಾರಿಕೆ ಸಚಿವರ ರಾಜ್ಯ ಸಮಾವೇಶ

ಜಿಲ್ಲಾ ಕೃಷಿ ಯೋಜನೆ ರೂಪಿಸಿ: ಶೋಭಾ

ಬೆಂಗಳೂರು: ಕೃಷಿ ಕ್ಷೇತ್ರದ ಪ್ರಗತಿಗೆ ಸಂಬಂಧಿಸಿದಂತೆ 'ಜಿಲ್ಲಾ ಕೃಷಿ ಯೋಜನೆ' (ಡಿಎಪಿ) ರೂಪಿಸಲು ಎಲ್ಲಾ ಜಿಲ್ಲೆಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದು ಎಲ್ಲಾ ರಾಜ್ಯಗಳ ಕೃಷಿ ಮತ್ತು ತೋಟಗಾರಿಕಾ ಸಚಿವರು ಮತ್ತು ಹಿರಿಯ ಅಧಿಕಾರಿಗಳಿಗೆ ಕೇಂದ್ರ ಕೃಷಿ ಮತ್ತು ರೈತರ ಕಲ್ಯಾಣ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಸೂಚಿಸಿದ್ದಾರೆ.

ಬೆಂಗಳೂರಿನಲ್ಲಿ ನಡೆಯುತ್ತಿರುವ ಎರಡು ದಿನಗಳ ಕೃಷಿ ಮತ್ತು ತೋಟಗಾರಿಕೆ ಸಚಿವರುಗಳ ರಾಜ್ಯ ಸಮಾವೇಶದಲ್ಲಿ ಮಾತನಾಡಿ, ಕೃಷಿ ಕ್ಷೇತ್ರದ ಪ್ರಗತಿ ಮತ್ತು ಮೂಲ ಸೌಕರ್ಯಕ್ಕೆ ಈಗಾಗಲೇ ಬಜೆಟ್‌ನಲ್ಲಿ ಅನುದಾನ ನಿಗದಿಪಡಿಸಲಾಗಿದೆ. ಆದರೆ, ಜಿಲ್ಲಾ ಕೃಷಿ ಯೋಜನೆಗಳು ಸಿದ್ಧವಾಗದೆ ಅನುದಾನ ಬಿಡುಗಡೆ ಕಷ್ಟಸಾಧ್ಯ ಎಂದರು. ಪ್ರತಿ ಜಿಲ್ಲೆಯಲ್ಲೂ ವಿಭಿನ್ನ ಕೃಷಿ ಚಟುವಟಿಕೆ ಮತ್ತು ಬೇಡಿಕೆ ಇರುತ್ತದೆ. ಹೀಗಾಗಿ ಕೃಷಿ ಕ್ಷೇತ್ರಕ್ಕೆ ಆಯಾ ಜಿಲ್ಲೆಗಳಲ್ಲಿ ಏನೇನು ನೆರವು ಅಗತ್ಯವಿದೆ? ಯಾವ ರೀತಿಯ ಕಾರ್ಯಕ್ರಮಗಳನ್ನು ರೂಪಿಸಬೇಕಾ ಗುತ್ತದೆ. ಜಿಲ್ಲಾ ಮಟ್ಟದಲ್ಲಿ ಈ ಕುರಿತಂತೆ ಜಿಲ್ಲಾ ಕೃಷಿ ಯೋಜನೆ ರೂಪಿಸಿದರೆ ಅದಕ್ಕೆ ಬೇಕಾಗುವ ಅನುದಾನ ಬಿಡುಗಡೆ ಮಾಡಲಾಗುತ್ತದೆ. ಆದರೆ ಬಹುತೇಕ ಜಿಲ್ಲೆಗಳಲ್ಲಿ ಈ ಕೆಲಸ ಆಗುತ್ತಿಲ್ಲ. ಆದ್ದರಿಂದ ಎಲ್ಲ ರಾಜ್ಯ ಸರಕಾರಗಳು ಈ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳಿಗೆ ಸೂಕ್ತ ನಿರ್ದೇಶನ ನೀಡಬೇಕು ಎಂದರು.



ಕೃಷಿ ಮತ್ತು ತೋಟಗಾರಿಕೆ ಸಚಿವರುಗಳ ರಾಜ್ಯ ಸಮಾವೇಶದಲ್ಲಿ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್, ರಾಜ್ಯ ಸಚಿವರಾದ ಶೋಭಾ ಕರಂದ್ಲಾಜೆ, ಕೈಲಾಶ್ ಚೌಧರಿ ಇದ್ದರು.

ಈ ಹಿಂದೆ ಕೃಷಿ ಉತ್ಪಾದನೆ ಹೆಚ್ಚಳದ ಬಗ್ಗೆ ಹೇಳಲಾ ಗುತ್ತಿತ್ತು. ಆದರೆ ಈಗ ಹೆಚ್ಚುವರಿ ಉತ್ಪಾದನೆಯಾ ಗುತ್ತಿದೆ. ಹೀಗಾಗಿ ಕೃಷಿ ಉತ್ಪನ್ನಗಳಿಗೆ ಮಾರುಕಟ್ಟೆ ಮತ್ತು ಅವುಗಳ ರಫ್ತಿನ ಬಗ್ಗೆ ಚರ್ಚೆಯಾಗಬೇಕು. ಕೃಷಿ ಉತ್ಪನ್ನಗಳ ಸಂಗ್ರಹಣೆಗೆ ಶೀಥಲ ಗೃಹಗಳು ಸೇರಿದಂತೆ ಮೂಲಸೌಕರ್ಯ ಒದಗಿಸುವ ಕೆಲಸವಾ ಗಬೇಕು ಎಂದು ಹೇಳಿದರು. ಈ ವೇಳೆ ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್ ಮಾತನಾಡಿ, ಕೆಲವು ರಾಜ್ಯಗಳು ಅಳವಡಿ ಸಿಕೊಂಡಿರುವ ಯೋಜನೆಗಳನ್ನು ಮಾದರಿಯಾಗಿಸಿ ಕೊಂಡು ಇತರ ರಾಜ್ಯಗಳು ಕೂಡ ಇಂತಹ ಕಾರ್ಯಕ್ರ ಮಗಳನ್ನು ಅನುಷ್ಠಾನಗೊಳಿಸುವಂತೆ ಸಲಹೆ ನೀಡಿ ದರು. ಕೇಂದ್ರ ಕೃಷಿ ಮತ್ತು ರೈತ ಕಲ್ಯಾಣ ಸಚಿವ ನರೇಂದ್ರ ಸಿಂಗ್ ತೋಮರ್, ರಾಜ್ಯ ಸಚಿವ ಕೈಲಾಶ್ ಚೌಧರಿ, ರಾಸಾಯನಿಕ ಮತ್ತು ರಸಗೊಬ್ಬರ ಖಾತೆ ರಾಜ್ಯ ಸಚಿವ ಭಗವಂತ್ ಖೂಬಾ ಉಪಸ್ಥಿತರಿದ್ದರು.

ದಿನವಿಡೀ ಸಂವಾದ

ವಿವಿಧ ರಾಜ್ಯಗಳು ಅನುಸರಿಸುತ್ತಿರುವ ಕೃಷಿ ಪದ್ಧತಿ, ಸರ್ಕಾರಗಳ ಕೃಷಿ ನೀತಿಗಳ ಕುರಿತು ದಿನವಿಡೀ ಪ್ರಾತ್ಯಕ್ಷಿಕೆ, ಸಂವಾದ ನಡೆಯಿತು. ರಾಜ್ಯಗಳ ಕೃಷಿ ಮತ್ತು ತೋಟಗಾರಿಕಾ ಸಚಿವರು ಹಾಗೂ ಅಧಿಕಾರಿಗಳು ತಮ್ಮ ರಾಜ್ಯಗಳಲ್ಲಿ ಜಾರಿಯಲ್ಲಿರುವ ನವೀನ ಕಾರ್ಯಕ್ರಮಗಳು ಮತ್ತು ಇದರಿಂದ ರೈತರಿಗೆ ಆಗುತ್ತಿರುವ ಪ್ರಯೋಜನ, ಕೃಷಿ ಕ್ಷೇತ್ರದಲ್ಲಿ ನೂತನ ತಂತ್ರಜ್ಞಾನ ಮತ್ತು ಯಂತ್ರೋಪಕರಣಗಳ ಬಳಕೆ, ಉತ್ಪನ್ನಗಳಿಗೆ ಮಾರುಕಟ್ಟೆ ಕಲ್ಪಿಸಲು ಕೈಗೊಂಡಿರುವ ಕ್ರಮಗಳ ಬಗ್ಗೆ ಮಾಹಿತಿ ನೀಡಿದರು.

ಟ್ರ್ಯಾಕ್ಟರ್, ಟಿಲ್ಲರ್ ಸೇರಿದಂತೆ ಕೃಷಿ ಕ್ಷೇತ್ರದಲ್ಲಿ ಬಳಸುವ ಯಂತ್ರೋಪಕರಣ ಗಳಿಗೆ ಒಂದೊಂದು ಜಿಲ್ಲೆಯಲ್ಲಿ ಪ್ರತ್ಯೇಕ ದರ ನಿಗದಿಪಡಿಸಲಾಗುತ್ತಿದೆ. ಇದು ಸರಿಯಲ್ಲ. ಆದ್ದರಿಂದ ಏಕರೂಪ ದರ ನಿಗದಿಪಡಿಸಿ ಕಂಪನಿ ಗಳು ಮತ್ತು ಸರಕಾರಿ ವೆಬ್‌ಸೈಟ್‌ಗಳಲ್ಲಿ ಪ್ರಕಟಿಸಲು ಕ್ರಮ ಕೈಗೊಳ್ಳಬೇಕು.

-ಶೋಭಾ ಕರಂದ್ಲಾಜೆ ಕೇಂದ್ರ ಸಚಿವೆ

16-07-2022
Vsv Pg 03

For more information visit
University Library Website
Web - uasbagrilibindia.org
E-mail- librarian@uasbangalore.edu.in

16-07-2022
Vk Pg 02

ಉತ್ತರ ಕನ್ನಡ, ದಕ್ಷಿಣ ಕನ್ನಡ, ಶಿವಮೊಗ್ಗದಲ್ಲೇ ಅತಿ ಹೆಚ್ಚು ನೋಂದಣಿ

ಬೆಳೆವಿಮೆಗೆ ಭಾರಿ ಡಿಮ್ಯಾಂಡ್

■ ಆತೀಶ್ ಬಿ. ಕನ್ನಾಳೆ ಶಿವಮೊಗ್ಗ
aatish.kannale@timesgroup.com

ಆರೋಗ್ಯ ವಿಮೆಯನ್ನೇ ಮಾಡಿಸಿಕೊಳ್ಳದಿರುವ ಜನರ ನಡುವೆ ಬೆಳೆ ವಿಮೆ ಮಾಡಿಸುವಂತಹ ರೈತರ ಸಂಖ್ಯೆ ಹೆಚ್ಚಾಗುತ್ತಿದೆ.

ಇತ್ತೀಚೆಗೆ ಹವಾಮಾನ ವೈಪರೀತ್ಯಗಳಿಂದಾಗಿ ಅತಿವೃಷ್ಟಿ ಮತ್ತು ಅನಾವೃಷ್ಟಿಗಳು ಸರ್ವೆ ಸಾಮಾನ್ಯ ಎಂಬಂತಾಗಿದ್ದು, ರೈತರು ಒಂದಿಲ್ಲೊಂದು ಕಾರಣಕ್ಕೆ ಬೆಳೆ ನಷ್ಟ ಮಾಡಿಕೊಳ್ಳುವುದು ಸಹ ಸಾಮಾನ್ಯವಾಗಿದೆ.

2022ರ ಜೂನ್ ಅಂತ್ಯಕ್ಕೆ ಬೆಳೆ ವಿಮೆ ನೋಂದಣಿ ಅವಧಿ ಮುಗಿದಿದೆ. ರಾಜ್ಯದಲ್ಲಿ ಒಟ್ಟು 3,82,651 ರೈತರು ನೋಂದಣಿ ಮಾಡಿಸಿಕೊಂಡಿದ್ದಾರೆ. ಅದರಲ್ಲಿ ದಕ್ಷಿಣ ಕನ್ನಡ ಜಿಲ್ಲೆಯಲ್ಲಿ 1,18,081 ರೈತರು ನೋಂದಾಯಿಸಿದ್ದು ಮೊದಲನೇ ಸ್ಥಾನದಲ್ಲಿದ್ದೆ. ಉತ್ತರ ಕನ್ನಡದಲ್ಲಿ 85,375 ನೋಂದಣಿ ಮೂಲಕ ದ್ವಿತೀಯ ಸ್ಥಾನದಲ್ಲಿದೆ. ಮೂರನೇ ಸ್ಥಾನದಲ್ಲಿ ಶಿವಮೊಗ್ಗ ಇದ್ದು 44,046 ಮಂದಿ ರೈತರು ಹೆಸರು ನೋಂದಾಯಿಸಿದ್ದಾರೆ.

ಇಲ್ಲಸ್ಪಂದನೆ: ಸರಕಾರ ವಿಮೆಯ ಬಗ್ಗೆ ಸಾಕಷ್ಟು ಜಾಗೃತಿ ಮೂಡಿಸಿದರೂ ರಾಜ್ಯದ ಒಟ್ಟಾರೆ ಕೃಷಿಕರ ಸಂಖ್ಯೆಗೆ ಹೋಲಿಸಿದರೆ ಬೆಳೆ ವಿಮೆ ಪ್ರಮಾಣ ಬಹಳ ಕಡಿಮೆ ಇದೆ. ಪ್ರಗತಿಪರ ಮತ್ತು ವಿದ್ಯಾವಂತ ರೈತರು ಬೆಳೆ ವಿಮೆ ಮಾಡಿಸುತ್ತಿದ್ದಾರೆ. ಅನಕ್ಷರಸ್ಥ ರೈತರಲ್ಲಿ ಈಗಲೂ ಜಾಗೃತಿ ಕೊರತೆ ಇದೆ.

ದಕ್ಷಿಣ ಕನ್ನಡ, ಉತ್ತರ ಕನ್ನಡ ಮತ್ತು ಶಿವಮೊಗ್ಗ ರಾಜ್ಯದಲ್ಲೇ ಟಾಪ್ 3 ಸ್ಥಾನದಲ್ಲಿದ್ದು, ಮಂಡ್ಯ, ಮೈಸೂರು, ಚಾಮರಾಜನಗರದಲ್ಲಿ ಯಾವೊಬ್ಬ ರೈತರೂ ಬೆಳೆ ವಿಮೆ ಮಾಡಿಸಿಲ್ಲ ಎಂಬುವುದು ವಿಶೇಷ.

ಟಾಪ್ 10 ಜಿಲ್ಲೆಗಳು

ದಕ್ಷಿಣ ಕನ್ನಡ	1,18,081
ಉತ್ತರ ಕನ್ನಡ	85,375
ಶಿವಮೊಗ್ಗ	44,046
ಚಿಕ್ಕಮಗಳೂರು	29,923
ತುಮಕೂರು	20,289
ವಿಜಯಪುರ	16,267
ಹಾವೇರಿ	14,344
ಹಾಸನ	9,317
ದಾವಣಗೆರೆ	9,205
ಉಡುಪಿ	7,740

ಬೆಳೆ ಹಾನಿ ಇನ್‌ಪುಟ್ ಸಬ್ಸಿಡಿಗೆ ಆದೇಶ

ಬೆಂಗಳೂರು: ಪ್ರಸಕ್ತ ಸಾಲಿನ ಮುಂಗಾರು ಹಾಗೂ ಹಿಂಗಾರು ಹಂಗಾಮಿನಲ್ಲಿ ಅತಿವೃಷ್ಟಿ ಪ್ರವಾಹದಿಂದಾಗುವ ಬೆಳೆ ಹಾನಿಗೆ ನೀಡುವ ಇನ್‌ಪುಟ್ ಸಬ್ಸಿಡಿಯನ್ನು ಪ್ರತಿ ರೈತರಿಗೆ ಗರಿಷ್ಠ 2 ಹೆಕ್ಟೇರ್‌ಗೆ ಸೀಮಿತವಾಗಿ ಪರಿಷ್ಕರಿಸಿ ಸರಕಾರ ಶುಕ್ರವಾರ ಆದೇಶ ಹೊರಡಿಸಿದೆ.

ಪರಿಷ್ಕೃತ ಇನ್‌ಪುಟ್ ಸಬ್ಸಿಡಿ ಸಂಬಂಧ ಷರತ್ತುಗಳನ್ನು ವಿಧಿಸಲಾಗಿದೆ. ಮುಂಗಾರು ಹಂಗಾಮು (ಜೂ.1ರಿಂದ ಸೆ. 30ರವರೆಗೆ) ಹಾಗೂ ಹಿಂಗಾರು ಹಂಗಾಮಿನಲ್ಲಿ (ಅ.1ರಿಂದ ಡಿ.31ರವರೆಗೆ) ಅತಿವೃಷ್ಟಿ/ ಪ್ರವಾಹದಿಂದ ಕೇಂದ್ರ ಸರಕಾರದ ಮಾರ್ಗಸೂಚಿಯನ್ವಯ ಶೇ. 33ಕ್ಕಿಂತ ಹೆಚ್ಚಿನ ಪ್ರಮಾಣದ ಬೆಳೆ ಹಾನಿಯನ್ನಷ್ಟೇ ಪರಿಗಣಿಸಬೇಕು ಎಂಬ ಷರತ್ತು ವಿಧಿಸಲಾಗಿದೆ. ಪರಿಷ್ಕೃತ ದರ ವಿವರ ಹೀಗಿದೆ.

- **ಮಳೆಯಾಶ್ರಿತ ಬೆಳೆ:** ಎಸ್‌ಡಿಆರ್‌ಎಫ್ / ಎನ್‌ಡಿಆರ್‌ಎಫ್ ಮಾರ್ಗಸೂಚಿ ದರ 6,800 ರೂ. ಜತೆಗೆ ಹೆಚ್ಚುವರಿಯಾಗಿ 8,600 ರೂ. ಸೇರಿದಂತೆ ಒಟ್ಟು 13,600 ರೂ.
- **ನೀರಾವರಿ ಬೆಳೆ:** ಎಸ್‌ಡಿಆರ್‌ಎಫ್ / ಎನ್‌ಡಿಆರ್‌ಎಫ್ ಮಾರ್ಗಸೂಚಿ ದರ 13,500 ರೂ. ಜತೆಗೆ ಹೆಚ್ಚುವರಿಯಾಗಿ 11,500 ರೂ. ಸೇರಿದಂತೆ ಒಟ್ಟು 25,000 ರೂ.
- **ಬಹುವಾರ್ಷಿಕ ಬೆಳೆ:** ಎಸ್‌ಡಿಆರ್‌ಎಫ್ / ಎನ್‌ಡಿಆರ್‌ಎಫ್ ಮಾರ್ಗಸೂಚಿ ದರ 18,000 ರೂ. ಜತೆಗೆ ಹೆಚ್ಚುವರಿಯಾಗಿ 10,000 ರೂ. ಸೇರಿದಂತೆ ಒಟ್ಟು 28,000 ರೂಪಾಯಿ.

ಕೃಷಿಮೂಲಸೌಕರ್ಯ ನಿಧಿಯಡಿ ಹಣಕಾಸು ನೆರವು: ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್

ರೈತ ಉತ್ಪಾದಕ ಸಂಸ್ಥೆಗಳಿಂದ 23 ಸಾವಿರ ಕೋಟಿ ರೂ. ಪ್ರಸ್ತಾವನೆ

ಬೆಂಗಳೂರು: ಕೃಷಿ ವಲಯಕ್ಕೆ ಪೂರಕವಾದ ವಿನೂತನ ಯೋಜನೆಗಳಿಗೆ ಹಣಕಾಸು ಸೌಲಭ್ಯ ಒದಗಿಸುವ ಕೇಂದ್ರದ 'ಕೃಷಿ ಮೂಲಸೌಕರ್ಯ ನಿಧಿ' ಆಡಿ ಕಳೆದ 3 ವರ್ಷಗಳಲ್ಲಿ ದೇಶಾದ್ಯಂತ ಒಟ್ಟಾರೆ 23 ಸಾವಿರ ಕೋಟಿ ಮೊತ್ತದ ವಿವಿಧ ಪ್ರಕಾರದ ಪ್ರಸ್ತಾವನೆಗಳು ಸ್ವೀಕರಿಸಲಾಗಿದ್ದು, ಈ ಪೈಕಿ 13 ಸಾವಿರ ಕೋಟಿ ಮೊತ್ತದ ಯೋಜನೆಗಳು ಪರಿಗಣನೆ ಹಂತದಲ್ಲಿವೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರಸಿಂಗ್ ತೋಮರ್ ತಿಳಿಸಿದರು.

'ಶೈತ್ಯಾಗಾರ, ಗೋದಾಮುಗಳು ಸೇರಿದಂತೆ ಕೊಯ್ಲೋತ್ತರ ಮೂಲಸೌಕರ್ಯಗಳ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ 2020ರಲ್ಲಿ ಈ ಕೃಷಿ ಮೂಲಸೌಕರ್ಯ ನಿಧಿ ಸ್ಥಾಪಿಸಿದೆ. ಇದರಡಿ ಬ್ಯಾಂಕ್‌ಗಳ ಮೂಲಕ ಒಂದು ಲಕ್ಷ ಕೋಟಿ ರೂ.ವರೆಗೂ ಹಣಕಾಸು ನೆರವು ನೀಡಲು ಅವಕಾಶ ಇದೆ. ಇದರಲ್ಲಿ ಈವರೆಗೆ 23 ಸಾವಿರ ಕೋಟಿ ಮೊತ್ತದ ವಿವಿಧ ಯೋಜನೆಗಳ ಪ್ರಸ್ತಾವನೆಗಳು ಸಲ್ಲಿಕೆಯಾಗಿವೆ. ಇದರಲ್ಲಿ 13 ಸಾವಿರ ಕೋಟಿ ಮೊತ್ತದ ಯೋಜನೆಗಳು ಅನುಮೋದನೆಯ ಹಲವು ಹಂತಗಳಲ್ಲಿದ್ದು, ಈ ಪೈಕಿ 9 ಸಾವಿರ ಕೋಟಿ ರೂ.ಗಳ ಪ್ರಸ್ತಾವನೆಗಳಿಗೆ ಬ್ಯಾಂಕ್‌ಗಳ ಮೂಲಕ ಹಣ ಬಿಡುಗಡೆ ಆಗಿದೆ' ಎಂದು ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.



ನಗರದಲ್ಲಿ ಶುಕ್ರವಾರ ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಸುದ್ದಿಗೋಷ್ಠಿ ನಡೆಸಿದರು.

ಯೋಜನೆಗಳ ಪ್ರಸ್ತಾವನೆ ಸಲ್ಲಿಸಿದವರಾರೂ ದೊಡ್ಡ ಕಂಪನಿಗಳ ಮಾಲಿಕರಲ್ಲ, ರೈತರು, ರೈತ ಉತ್ಪಾದಕ ಸಂಘಗಳಾಗಿವೆ. ವಿನೂತನ ಯೋಜನೆಗಳಿಗೆ ಈ ನಿಧಿ ಅಡಿ ವೇದಿಕೆ ಕಲ್ಪಿಸಲಾಗುತ್ತದೆ. ಬ್ಯಾಂಕ್‌ಗಳ ಮೂಲಕ ಕನಿಷ್ಠ ಬಡ್ಡಿದರ (ಶೇ. 3)ದಲ್ಲಿ ಸಾಲಸೌಲಭ್ಯ ಕಲ್ಪಿಸಲಾಗುತ್ತದೆ. ಯೋಜನೆ ಅವಧಿ 2025-26ರವರೆಗೆ ಇರಲಿದೆ ಎಂದರು.

ಸುದ್ದಿಗೋಷ್ಠಿಯಲ್ಲಿ ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ, ಕೃಷಿ ಸಚಿವ ಬಿ.ಸಿ. ಪಾಟೀಲ್ ಉಪಸ್ಥಿತರಿದ್ದರು.

3.21 ಲಕ್ಷಕ್ಕೂ ಹೆಚ್ಚು ರೈತರಿಗೆ ಅನುಕೂಲ

10 ಸಾವಿರ ರೈತ ಉತ್ಪಾದಕ ಸಂಸ್ಥೆ (ಎಫ್‌ಪಿಒ)ಗಳ ರಚನೆ ಮತ್ತು ಉತ್ತೇಜನಕ್ಕಾಗಿ ಕೇಂದ್ರ ವಲಯದ ಯೋಜನೆ ಆಡಿ ಆರ್ಥಿಕ ನೆರವು ನೀಡಲಾಗುತ್ತಿದ್ದು, ಇದುವರೆಗೆ ಸುಮಾರು 1,018 ರೈತ ಉತ್ಪಾದಕ ಸಂಘಗಳಿಗೆ 38 ಕೋಟಿಗೂ ಅಧಿಕ ಈಕ್ವಿಟಿ ಅನುದಾನ ಬಿಡುಗಡೆ ಮಾಡಲಾಗಿದೆ. ಇದರಿಂದ 3.21 ಲಕ್ಷಕ್ಕೂ ಹೆಚ್ಚು ರೈತರಿಗೆ ಅನುಕೂಲ ಆಗಲಿದೆ. ಉದ್ದೇಶಿತ ಈ ಯೋಜನೆ ಆಡಿ ಮೂರು ವರ್ಷಗಳ ಅವಧಿಗೆ ಪ್ರತಿ ರೈತ ಉತ್ಪಾದಕ ಸಂಸ್ಥೆಗೆ 18 ಲಕ್ಷ ರೂ.ವರೆಗೆ ಆರ್ಥಿಕ ನೆರವು ನೀಡಲಾಗುತ್ತದೆ ಎಂದು ಕೇಂದ್ರ ಕೃಷಿ ಸಚಿವ ನರೇಂದ್ರಸಿಂಗ್ ತೋಮರ್ ವಿವರಿಸಿದರು.

16-07-2022 Uv Pg 01

'Rainforest defaunation is huge — these species are key'



***Rodolfo Dirzo** teaches environmental science at Stanford University. He tells **Times Evoke** about 'defaunation' — and reviving rainforest fauna:*

I am an evolutionary ecologist — I study the evolution of plants, animals and microorganisms on Earth. However, as I completed my PhD, I realised the destruction of ecosystems worldwide was becoming so intense, learning about the conservation of nature was crucial even to understand how life works. So, I combined my interests in evolution, or the amazing interactions created over time between plants, animals and microorganisms, with how these are being modified by human impacts now.

I work on tropical forest ecosystems in Mexico, etc. Over the years, I have seen how these expansive ecosystems have become small, isolated patches of vegetation — I research whether processes of evolution in biodiversity can survive such habitat fragmentation. The interactions between plants and animals in tropical rainforests are exuberant manifestations of diversity — these beings benefit mutually through pollination and seed dispersal. They also jointly regulate the ecosystem. The floor of the rainforest is like a gigantic mega-salad for animals to feed — since they consume a bit of each, all species can live in a balance. Interestingly, to protect themselves from being eaten entirely, some rainforest plants have developed toxic compounds — these form the basis of many modern medicines we human beings use.

Now, imagine a rainforest understory where all these interactions, from seed dispersal to plant regulation, have evolved. Remove that understory with humans clearing the space. This will damage these processes severely — the same happens when hunting and poaching occur, causing the loss of animal life. I use the term 'defaunation' to describe this loss. We are familiar with 'deforestation' to understand the loss of forests. But that doesn't let us see the full impacts and implications of the loss of animal life. We hope 'defaunation' will help citizens and policy makers measure the magnitude of this loss.



iStock

WILL YOU BE MY FRIEND? A red-eyed tree frog, Agalychnis callidrias, which helps control algae and the spread of pathogens, wonders about us from its home deep inside the Costa Rican rainforest

FAUNA MATTERS

The scale is massive. In the Brazilian Amazon, the most diverse rainforest on Earth, researchers have found we are losing 40 million vertebrates — monkeys, birds, deer — to hunting and poaching each year. Compiling data from the world's rainforests, we found this trend consistent. We then added deforestation or the loss of habitat and the numbers rose even more. These numbers hide other numbers — when monkeys are removed from a rainforest, they could be mothers or fathers of baby monkeys. The latter cannot survive without their parents. Removing animals therefore has cascading consequences.

The rate of decline of vertebrates alone has been staggering — over the last four decades, these animals have shrunk by 30%. Tropical defaunation is at an approximately 50% rate of decline over the last 40 years — human impacts have halved these animals. We once had a panorama of life on Earth. This faces very serious problems now. But there are solutions too. The first step is to spread awareness of defaunation and why this matters so much, exacerbating climate change with the loss of plants. Scientists and ecologists must engage the global public to stop the destruction of habitats, which is the biggest driver of biodiversity loss. We must protect what's left and try to rejuvenate where we can. Refaunation is possible — we can successfully return animals via rewilding and translocation to the homes they have lost. They will help revive vital ecosystem processes and control rodents that carry dangerous pathogens.

It is also very important to respect the knowledge of indigenous societies. These have conserved viable forestry and sustainable agriculture through diversified land use, mosaics of agriculture, agri-pastoral and forest management systems that save biodiversity. As rainforests show, fauna supports flora which supports Earth — to sustain our planet, refaunation is key.

16-07-2022 Times of Ind Pg 02